# ‘ಕಣಜ’ ವೆಬ್‌ಸೈಟ್‌ಗೆ ಮರುಚಾಲನೆ

**ವಿಕ ಸುದ್ದಿಲೋಕ** ಬೆಂಗಳೂರು

ತಂತ್ರಜ್ಞಾನವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಬಳಸಿಕೊಂಡು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಮತ್ತಷ್ಟು ಜನಪರ ಮಾಡಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವೆ ಉಮಾಶ್ರೀ ಹೇಳಿದ್ದಾರೆ.

ಇಲ್ಲಿನ ಕನ್ನಡ ಭವನದಲ್ಲಿ ಶನಿವಾರ ಅಂತರ್ಜಾಲ ಕನ್ನಡ ಜ್ಞಾನಕೋಶ ಯೋಜನೆ ‘ಕಣಜ’ಕ್ಕೆ ಮರುಚಾಲನೆ ಮತ್ತು ಇಲಾಖೆಯ ನಾನಾ ಆನ್‌ಲೈನ್ ಸೇವೆಗಳನ್ನು ಉದ್ಘಾಟಿಸಿದ ಬಳಿಕ ಅವರು ಮಾತನಾಡಿದರು. ಈ ಸಂದರ್ಭದಲ್ಲಿ ಇದುವರೆಗೂ ಪ್ರಾಯೋಗಿಕವಾಗಿ ಜಾರಿಯಲ್ಲಿದ್ದ ಇಲಾಖೆಯ ಧನಸಹಾಯ ಯೋಜನೆ, ಸಿರಿಗನ್ನಡ ಪುಸ್ತಕ ಮಳಿಗೆಯ ಆನ್‌ಲೈನ್ ಸೇವೆ, ಜಿಲ್ಲಾ ರಂಗಮಂದಿರಗಳ ಆನ್‌ಲೈನ್ ಬುಕ್ಕಿಂಗ್ ಯೋಜನೆಗಳಿಗೆ ಅಧಿಕೃತ ಚಾಲನೆ ನೀಡಿದರು.

''ಇಲಾಖೆಯಲ್ಲಿ ಈ ಮೊದಲು ಮಧ್ಯವರ್ತಿಗಳ ಕಾಟ ಮೇರೆ ಮೀರಿತ್ತು. ಇದನ್ನು ತಂತ್ರಜ್ಞಾನದ ಅಳವಡಿಕೆ ಮೂಲಕ ಪರಿಣಾಮಕಾರಿಯಾಗಿ ಹತ್ತಿಕ್ಕಲಾಗಿದೆ. ಜನರು ನೇರವಾಗಿ ಇಲಾಖೆಯೊಂದಿಗೆ ಪಾರದರ್ಶಕವಾಗಿ ವ್ಯವಹರಿಸುವಂತಾಗಬೇಕು ಎನ್ನುವುದು ಇದರ ಹಿಂದಿನ ಆಶಯ,'' ಎಂದರು.

''ಇಲಾಖೆಯು ನಾಡು-ನುಡಿಯ ಪರ ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಈ ಯೋಜನೆಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮತ್ತು ವ್ಯಾಪಕವಾಗಿ ಜಾರಿಗೊಳಿಸಬೇಕಾದ ಅನಿವಾರ್ಯತೆ ನಮ್ಮ ಮುಂದಿದೆ,'' ಎಂದರು.

ಈ ಸಂದರ್ಭದಲ್ಲಿ ಇಲಾಖೆಯ ಕಾರ್ಯದರ್ಶಿ ಚಿನ್ನಪ್ಪ ಗೌಡ, ನಿರ್ದೇಶಕ ಕೆ.ಎ. ದಯಾನಂದ, ಹಿರಿಯ ಪತ್ರಕರ್ತ ನಾಗೇಶ ಹೆಗಡೆ, ಇತಿಹಾಸ ತಜ್ಞ ಎಚ್.ಎಸ್. ಗೋಪಾಲ ರಾವ್, ಪತ್ರಕರ್ತ ಇಸ್ಮಾಯಿಲ್ ಮತ್ತು ‘ಕಣಜ’ ಯೋಜನೆಯ ಕೋರ್ ಕಮಿಟಿಯ ಸದಸ್ಯರು ಉಪಸ್ಥಿತರಿದ್ದರು.



**ಕನ್ನಡ-ಸಂಸ್ಕೃತಿ ಇಲಾಖೆಯ ‘ಕಣಜ’ ಮತ್ತು ನಾನಾ ಆನ್‌ಲೈನ್ ಸೇವೆಗಳಿಗೆ ಸಚಿವೆ ಉಮಾಶ್ರೀ ಅವರು ಶನಿವಾರ ನಗರದ ಕನ್ನಡ ಭವನದಲ್ಲಿ ಚಾಲನೆ ನೀಡಿದರು. ಕೆ.ಎ.ದಯಾನಂದ, ಬಲವಂತರಾವ್ ಪಾಟೀಲ್, ಚಿನ್ನಪ್ಪಗೌಡ, ನಂದೀಶ್ ಉಪಸ್ಥಿತರಿದ್ದರು.**

Inauguration of Software by
Mrs.Umashree (Minister)